ಅ) ಸದರಿ ಬಡಾವಣೆಯಲ್ಲಿ ನೆಲಮಟ್ಟದ ರಿಸರ್ವಾಯರ್ ಕಟ್ಟಲು ಜಮೀನನ್ನು ನೀಡಿದ್ದರೂ ಟೆಂಡರ್ ಕರೆಯದೆ ನಿರ್ಲಕ್ಷ್ಯ ಮಾಡುತ್ತಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಇ) ಸದರಿ ಬಡಾವಣೆಗೆ ಜರೂರಾಗಿ ನೀರು ಒದಗಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು ?

ಶ್ರೀ ಎ. ಲಕ್ಷ್ಮೀ ಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ, ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ರಿಸರ್ವಾಯರ್ ಕಟ್ಟಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜಾಗವನ್ನು ಬದಲಾಯಿಸುವ ಆಲೋಚನೆಯಿದ್ದುದರಿಂದ ಇದನ್ನು ಕಟ್ಟಲು ನಿಧಾನವಾಯಿತು. ಆದುದರಿಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿತರಣಾ ಕೊಳವೆಗಳನ್ನು ಹಾಕಿದ ನಂತರ ನೀರೊದಗಿಸಲು ಜಲ ಮಂಡಲಿಯು ಯೋಜನೆ ಹಾಕಿಕೊಂಡಿದೆ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮೊದಲನೆ ಪ್ರಶ್ನೆಯಲ್ಲಿ ಸುಮಾರು ೩-೪ ವರ್ಷಗಳಾದರೂ ಏನೂ ಕೆಲಸ ಮಾಡಿಲ್ಲ. ಸುಮಾರು ಒಂದು ಕೋಟಿ ೩೨ ಲಕ್ಷ ಕಟ್ಟಿದ್ದರೂ ಕೇವಲ ೧೧ ಲಕ್ಷ ಖರ್ಚು ಮಾಡಿದ್ದಾರೆ ಎಂದು ಕೇಳಿದ್ದೇನೆ. ಅಲ್ಲಿ ಸಾವಿರಾರು ಜನರು ವಾಸ ಮಾಡುತ್ತಾ ಇದ್ದಾರೆ. ಅವರಿಗೆ ನೀರಿನ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಸೈಟು ಕೊಟ್ಟಿದ್ದಾರೆ. ಮನೆ ಮಾಡಿದ್ದಾರೆ ಆದರೆ ಏನೂ ವ್ಯವಸ್ಥೆ ಇಲ್ಲ. ಇಂತಹ ಪರಿಸ್ಥಿತಿ ಇದೆ. ಏನು ಮಾಡುತ್ತೀರಿ? ಈಗಾಗಲೇ ಬಿ. ಡಿ. ಎ.ನವರು ಸೈಟು ಕೊಟ್ಟಿದ್ದಾರೆ. ಬರೀ ಆಲೋಚನೆ ಮಾಡುವುದರಲ್ಲೇ ೩-೪ ವರ್ಷ ಕಳೆದರೆ ಶುರು ಮಾಡುವುದು ಯಾವಾಗ ? ಎರಡನೆಯದಾಗಿ, ನೀರನ್ನು ಏನಾದರೂ ಇಪ್ಪು ದಿವಸದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೀರಾ ? ಅದಕ್ಕೆ ಏನಾದರೂ ಗಡುವು ಕೊಟ್ಟಿದ್ದೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಜಲ ಸಂಗ್ರಹಕಾರದ ಪ್ರದೇಶವನ್ನು ಕಟ್ಟುವುದಕ್ಕೋಸ್ಕರ ೯-೧೦-೧೯೮೭ರಲ್ಲಿ ಜಾಗ ಕೊಟ್ಟಿದ್ದಾರೆ. ಅಂದರೆ ಈ ವರ್ಷ ಜನವರಿಯಲ್ಲಿ ಕೊಟ್ಟಿದ್ದಾರೆ. ಅಲ್ಲಿ ಜಲಸಂಗ್ರಹಗಾರವನ್ನು ನಿರ್ಮಾಣ ಮಾಡಬೇಕು, ಅದನ್ನು ಬೇಗ ಮಾಡಿಸುವುದಕ್ಕೆ ನಾನು ಏರ್ಪಾಟು ಮಾಡುತ್ತೇನೆ.

ಶ್ರೀ ಬಿ. ಧರ್ಮಪ್ಪ.— ಕೊನೇ ಪಕ್ಷ ಎಷ್ಟು ದಿವಸದಲ್ಲಿ ಮುಗಿಸುತ್ತೀರಿ ?

ಅಧ್ಯಕ್ಷರು.—ತಾವು ವಕೀಲರು. ಅವರು ಬೇಗ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದಾರೆ.

ಗುಲ್ಬರ್ಗಾ ನಗರದಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಗೃಹಗಳನ್ನು ಹಂಚುವ ಬಗ್ಗೆ

೧೦೨. ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಮಾನ್ಯ ಗೃಹನಿರ್ಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ನಗರದಲ್ಲಿ ಬಡೆಪುರ, ರಾಜಪುರ ಮತ್ತು ಎಂ. ಎಸ್. ಕೆ. ಮಿಲ್ಲಿನ ಹತ್ತಿರ ಕರ್ನಾಟಕ ಗೃಹ ಮಂಡಳಿಯವರು ಹುಡ್ಕೋ ಯೋಜನೆಯಡಿಯಲ್ಲಿ ಕಟ್ಟಿದ ಮನೆಗಳು ಎಂದು ಪೂರ್ತಿಗೊಂಡಿವೆ ? ಹಾಗೂ ಕಟ್ಟಡಗಳ ಪ್ರಾರಂಭ ಮತ್ತು ಮುಕ್ತಾಯ ಯೋಜನಾ ಬದ್ಧವಾಗಿದೆಯೇ ?

ಆ) ಕಟ್ಟಡಗಳ ನಿರ್ಮಾಣ ಕಾರ್ಯವು ನಿಗದಿತ ಸಮಯದಲ್ಲಿ ಆಗದಿದ್ದರೆ ಅದಕ್ಕೆ ಕಾರಣವೇನು ? ಮತ್ತು ನಿಗದಿತ ದರಕ್ಕಿಂತ ಮನೆಗಳ ವೆಚ್ಚ ಎಷ್ಟು ಹೆಚ್ಚಾಯಿತು ?

ಇ) ಎಲ್ಲಾ ಮನೆಗಳ ಹಂಚಿಕೆ ಪಡೆದವರಲ್ಲಿ ಎಷ್ಟು ಜನರಿಗೆ ಮಾಲಿಕತ್ವ ಕೊಡಲಾಯಿತು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ವಸತಿ ಸಚಿವರು).—

ಅ) ಈ ನಗರದಲ್ಲಿ ಮೊದಲನೇ ಹಂತದಲ್ಲಿ ೯೪ ಇಡಬ್ಲ್ಯೂಎಸ್,೧೨೪ ಎಲ್‌ಐಜಿ, ಮತ್ತು ೪೮ ಎಂಐಜಿ ಮನೆಗಳನ್ನು ೧೯೮೧ರಲ್ಲಿ ಪೂರ್ಣ ಗೊಳಿಸಲಾಗಿದೆ. ಎರಡನೇ ಹಂತದಲ್ಲಿ ೧೨೫ ಇಡಬ್ಲ್ಯೂಎಸ್ ೮೬ ಎಲ್‌ಐಜಿ ಮತ್ತು ೩೮ ಎಂಎಲ್‌ಜಿ ಮನೆಗಳನ್ನು ೩೦-೬-೧೯೮೫ರಲ್ಲಿ ಪೂರ್ಣಗೊಳಿಸಲಾಗಿದೆ. ಮೂರನೇ ಹಂತದಲ್ಲಿ ೨೦೫ ಎಲ್‌ಐಜಿ ಮತ್ತು ೭ ಎಂಐಜಿ ಮನೆಗಳನ್ನು ೩೦-೯-೧೯೮೫ ರಂದು ಪೂರ್ಣ ಗೊಳಿಸಲಾಗಿದೆ. ನಗರದ ಎಂಎಸ್‌ಕೆ ಮಿಲ್ ಬಡಾವಣೆಯಲ್ಲಿ ೧೪೬ ಇಡಬ್ಲ್ಯೂಎಸ್ ೯೪ ಎಲ್‌ಐಜಿ ಮತ್ತು ೨೭ ಎಂಐಜಿ ಮನೆಗಳನ್ನು ೩೦-೬-೧೯೮೫ರಲ್ಲಿ ಪೂರ್ಣಗೊಳಿಸಲಾಯಿತು.

ಕಟ್ಟಡಗಳ ಪ್ರಾರಂಭ ಮತ್ತು ಮುಂಕ್ತಾಯ ಯೋಜನಾ ಬದ್ಧವಾಗಿ ಆಗಿರುವುದಿಲ್ಲ.

ಆ) ನೀರು ಸರಬರಾಜು ಒಳಚರಂಡಿ ಹಾಗೂ ವಿದ್ಯುಚ್ಛಕ್ತಿ ಸರಬರಾಜು ಕಾಮಗಾರಿಗಳಲ್ಲಿ ಕೆಡೆ.

ಗುತ್ತಿಗೆದಾರರನ್ನು ನೇಮಿಸುವುದರಲ್ಲಿ ವಿಳಂಬ.

ಕಟ್ಟಡಗಳಲ್ಲಿ ಕೆಲವು ಅವಶ್ಯಕ ಮಾರ್ಪಾಡು ಅನಿವಾರ್ಯವಾದ್ದರಿಂದ.

ಮನೆಗಳ ದರಗಳ ವಿವರ

ಬಡೇಪುರ ಮೊದಲನೆ ಹಂತ

ಪ್ರಕಟಿಸಲಾದ ದರ		ತಾತ್ಕಾಲಿಕ ಬೆಲೆ
ಇಡಬ್ಲ್ಯೂಎಸ್	೮,೫೮೦	೯,೦೦೨
ಎಲ್‌ಐಜಿ	೧೮,೮೦೦	೪೩,೦೦೦
ಎಂಐಜಿ	೪೨,೦೦೦	೬೫,೦೦೦

ಬಡೇಪುರ ಎರಡನೇ ಹಂತ

ಪ್ರಕಟಿಸಲಾದ ದರ		ತಾತ್ಕಾಲಿಕ ಬೆಲೆ
ಇಡಬ್ಲ್ಯೂಎಸ್	೮,೫೮೦	೧೯,೪೫೦
ಎಲ್‌ಐಜಿ	೧೮,೮೦೦	೪೫,೦೦೦
ಎಂಐಜಿ	೪೨,೦೦೦	೭೦,೦೫೨

ಬಡೇಪುರ ಮೂರನೇ ಹಂತ

ಪ್ರಕಟಿಸಲಾದ ದರ		ತಾತ್ಕಾಲಿಕ ಬೆಲೆ
ಎಲ್‌ಐಜಿ	೧೮,೦೦೦	೪೫,೦೦೦
ಎಂಐಜಿ	೪೨,೦೦೦	೭೦,೦೫೨

ಎಂಎಸ್‌ಕೆ ಮಿಲ್

ಪ್ರಕಟಿಸಲಾದ ದರ		ತಾತ್ಕಾಲಿಕ ದರ
ಇಡಬ್ಲ್ಯೂಎಸ್	೮,೦೦೦	೧೬,೫೨೦
ಎಲ್‌ಐಜಿ	೧೮,೦೦೦	೩೨,೧೫೫
ಎಂಐಜಿ	೪೨,೦೦೦	೭೦,೦೮೬

ಬಡೇಪುರ ಮೊದಲನೇ ಹಂತ

	ಮನೆಗಳು ಕಟ್ಟಿದ ಸಂಖ್ಯೆ	ಹಂಚಿಕೆಯಾದ ಸಂಖ್ಯೆ	ಮಾಲಿಕತ್ವ ಕೊಡಲಾದ ಸಂಖ್ಯೆ
ಇಡಬ್ಲ್ಯೂಎಸ್	೯೪	೯೪	೯೨
ಎಲ್ಐಜಿ	೧೨೫	೧೨೫	೧೨೫
ಎಂಐಜಿ	೪೮	೪೮	೪೮

ಬಡೇಪುರ ಎರಡನೇ ಹಂತ

ಇದಬ್ಲ್ಯೂಎಸ್	೧೨೫	೧೨೫	೮
ಎಲ್ಐಜಿ	೮೬	೮೬	೪೨
ಎಂಐಜಿ	೩೮	೩೮	೩೪

ಬಡೇಪುರ ಮೂರನೇ ಹಂತ

ಎಲ್ಐಜಿ	೨೦೫	೨೦೫	೫೯
ಎಂಐಜಿ	೭	೭	೭

ಎಂ.ಎಸ್.ಕೆ. ಮಿಲ್

ಇಡಬ್ಲ್ಯೂಎಸ್	೧೪೬	೧೪೬	೧೨೩
ಎಲ್ಐಜಿ	೯೪	೯೪	೭೯
ಎಂಐಜಿ	೨೭	೨೭	೧೮

ಶ್ರೀ ಎಸ್. ಕೆ. ಕಾಂತಾ.—ಮಾನ್ಯ ಅಧ್ಯಕ್ಷರೆ, ಈಗ ಕಟ್ಟಿರತಕ್ಕ ಮನೆಗಳು ವಿಳಂಬವಾಗಲಿಕ್ಕೆ ಕಾರಣ ಅಲ್ಲಿನ ಅಣಾಟೀಸ್‌ದು ತಪ್ಪಲ್ಲ. ಕೆಲವು ಕಾರಣಗಳನ್ನು ಮಾನ್ಯ ಮಂತ್ರಿಗಳು ತೋರಿಸಿದ್ದಾರೆ. ಆ ಕಾರಣಗಳಿಂದ ಈ ರೀತಿ ತಪ್ಪಿನಿಂದ ರೇಟ್ ಡಬಲ್ ಆಗಿದೆ. ಇಡಬ್ಲ್ಯೂಎಸ್‌ನಲ್ಲಿ ೮ ಸಾವಿರದ ಮನೆ ೧೬,೫೨೦ ಆಗಿದೆ ಎಲ್.ಐ.ಜಿ ಯಲ್ಲಿ ೧೮ ಸಾವಿರದ ಮನೆ ೩೨,೧೩೫ ಆಗಿದೆ. ಎಂ.ಐ.ಜಿ.ಯಲ್ಲಿ ೪೨ ಸಾವಿರದ ಮನೆ ೭೦,೦೮೬ ಆಗಿದೆ. ಇದಕ್ಕೆ ಅವರು ಏಕೆ ಹೊಣೆಗಾರರಾಗಬೇಕು? ಕಟ್ಟಡಗಳ ನಿರ್ಮಾಣ ಕಾರ್ಯ ನಿಗದಿತ ಸಮಯದಲ್ಲಿ ಆಗದೇ ಇರುವುದಕ್ಕೆ. ಆ ತಪ್ಪಿಗೆ ಅಲಾಟೀಸನ್ನು ಏಕೆ ಹೊಣೆಗಾರರನ್ನಾಗಿ ಮಾಡುತ್ತೀರಿ?

ಶ್ರೀ ಅಬ್ದುಲ್ ಸಜೀರ್ ಸಾಬ್.– ಒಂದಕ್ಕೆ ನಾಲ್ಕರಷ್ಟು ಆಗಿದೆ ನಿಜ. ಕಾಲಕ್ಕೆ ಸರಿಯಾಗಿ ಯೋಜನೆ ಮುಗಿಯದಿರುವುದಂ ನಿಜ .ಇದಕ್ಕೆ ಅನೇಕ ಕಾರಣಗಳಿವೆ ಯಾರಂ ಯಾರಿಗೆ ಮನೆಗಳನ್ನು ಕೊಡಬೇಕು ಎಂದು ಹೇಳಿದ್ದಾರೆ ಅವರಿಗೆ ಬೆಲೆ ಜಾಸ್ತಿಯಾಗಿರುವುದಕ್ಕೆ ಯಾವುದೇ ರೀತಿಯ ಪರಿಹಾರ ಕೊಡತಕ್ಕದ್ದು ನಿಯಮಾವಳಿಗಳಲ್ಲಿ ಇಲ್ಲ. ಇದಕ್ಕೆ ಪರಿಹಾರ ರೂಪವಾಗಿ ನಾವು ಏನು ಮಾಡಿದ್ದೇವೆಂದರೆ. ಈಗ ನೀರು ಸರಬರಾಜು ಒಳಚರಂಡಿ ಇಲಾಖೆ ಕುಡಿಯುವ ನೀರನ್ನು ವಿದ್ಯುಚ್ಛಕ್ತಿ ಇಲಾಖೆ ವಿದ್ಯುಚ್ಛಕ್ತಿಯ ಕಾರ್ಯ ಮಾಡುವುದಕ್ಕೆ ಬದಲಾಗಿ ಸದ್ಯದಲ್ಲಿ ಮತ್ತೊಂದು ತಿದ್ದುಪಡಿ ತರುತ್ತಾ ಇದ್ದೇನೆ. ಹೌಸಿಂಗ್‌ಬೋರ್ಡ್ ಸಮಗ್ರ ಯೋಜನೆಗಳನ್ನು ಕಾಲಕ್ಕೆ ಸರಿಯಾಗಿ ಪೂರ್ತಿಗೊಳಿಸತಕ್ಕಂಥ ಕಾರ್ಯಕ್ರಮವನ್ನು ಮಾಡಿದ್ದೇವೆ. ಜೊತೆಗೆ ಇದಕ್ಕೆ ಗುತ್ತಿಗೆದಾರರು ಕೂಡ ಸಿಕ್ಕುವುದಿಲ್ಲ ಸಿಕ್ಕಿದರೂ ಕೂಡ ಅವರು ಕೆಲಸವನ್ನು ನಿಧಾನ ಮಾಡುತ್ತಾರೆ ಇನ್ನು ೫೯೦ ಮನೆಗಳನ್ನು ಭೂ ಸೇನಾ ನಿಗಮದ ಮೂಲಕ ಮಾಡಿಸುವ ಕಾರ್ಯಕ್ರಮ ಕೈಗೊಂಡಿದ್ದೇವೆ, ಇನ್ನು ಮುಂದಕ್ಕೆ ಸ್ವಲ್ಪಮಂಟ್ಟಿಗೆ ತೊಂದರೆ ಪರಿಹಾರವಾಗುತ್ತದೆ.

ಶ್ರೀ ಎಸ್. ಕೆ. ಕಾಂತಾ.—ಸ್ವಾಮಿ. ಮನೆಗಳನ್ನು ಸ್ವಾಧೀನಕ್ಕೆ ಕೊಡುವುದಕ್ಕೆ ಮುಂಚೆ ಕೆಲವು ಸವಲತ್ತುಗಳನ್ನು ಕೊಡಬೇಕಾಗುತ್ತದೆ ಇಷ್ಟು ಹಣ ಕೊಟ್ಟರೆ ಮಾತ್ರ ಸ್ವಾಧೀನಕ್ಕೆ ಕೊಡುತ್ತೇವೆಂದು ಹೇಳುತ್ತಾರೆ. ಬಡೆಪೂರ ಬಡಾವಣೆಯಲ್ಲಿ ಒಟ್ಟು ೨೦೫ ಮನೆಗಳನ್ನು ಕಟ್ಟಿದ್ದರೂ ಕೇವಲ ೫೯ ಮನೆಗಳನ್ನು ಮಾತ್ರ ಕೊಟ್ಟಿದ್ದಾರೆ. ಈ ಮನೆಗಳಿಗೆ ಸವಲತ್ತು ಕೊಡಲಾಗಿದೆಯೆ? ಇನ್ನು ರಾಜಪೂರ ಹತ್ತಿರ ಕಟ್ಟಿರುವ ೧೫ ಮನೆಗಳಲ್ಲಿ ೮ ಮನೆಗಳನ್ನು ಕೊಟ್ಟಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬಡವರಿಗೆ ಎಲ್ ಐ.ಜಿ. ಮನೆಗಳನ್ನು ಮಂತ್ತು ಇಡಬ್ಲ್ಯೂ.ಎಸ್. ಮನೆಗಳನ್ನು ಕೊಡಲಾಗುತ್ತದೆ. ೮, ೦೦ ರೂಪಾಯಿಗಳು ಇದ್ದದ್ದು. ೧೬ ರಿಂದ ೧೯ ಸಾವಿರ ರೂಪಾಯಿಗಳಿಗೆ ಆಗಿದೆ. ನಿಯಮಗಳ ಪ್ರಕಾರ ಎಷ್ಟು ಸವಲತ್ತು ಕೊಡುವುದಕ್ಕೆ ಸಾಧ್ಯವೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕಂತು ಕೊಡುವ ವಿಚಾರವನ್ನು ಪರಿಶೀಲನೆ ಮಾಡಲಾಗುವುದು.

ಪ್ರ. ಸ. ೨೫೦ (೭೫೮)

ಒಬ್ಬ ಮಾನ್ಯ ಸದಸ್ಯರು (ಎಸ್. ಡಿ. ಜಯರಾಮ್ ಪರವಾಗಿ).—ಮಾನ್ಯ ಅಧ್ಯಕ್ಷರೆ, ೧೯೭೮ನೇ ಇಸವಿಯಿಂದ ಮನೆ ಕಟ್ಟಲು ಪ್ರಾರಂಭ ಮಾಡಿದ್ದು. ಕೆಲವರಿಗೆ ಮಾತ್ರ ಕೊಟ್ಟಿದ್ದಾರೆ. ಹೆಚ್ಚಿಗೆ ಮನೆಗಳನ್ನು ಕಟ್ಟದೇ ಇರುವುದಕ್ಕೆ ಕಾರಣವೇನು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಕೆಲವು ಕಡೆ ಮನೆಗಳನ್ನು ೭೮ರಿಂದ ಕಟ್ಟಲಾಗಿದ್ದರೂ ಅನೇಕ ಮನೆಗಳನ್ನು ಸರ್ಕಾರಕ್ಕೆ ವಹಿಸಿಕೊಟ್ಟಿಲ್ಲ. ಅವುಗಳಿಗೆ ನೀರಿನ ವ್ಯವಸ್ಥೆ ಒಳಚರಂಡಿ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆಯಾಗಿಲ್ಲ. ಸಮಗ್ರ ಯೋಜನೆಯನ್ನು ಮಾಡಿ, ಗೃಹಮಂಡಲಿಯವರೇ ಜವಾಬ್ದಾರಿ ತೆಗೆದುಕೊಂಡು, ಎಲ್ಲಾ ಕೆಲಸಗಳನ್ನು ಮಾಡುವಂಥ ಒಂದು ಶಾಸನವನ್ನು ತರುತ್ತೇನೆ ಇನ್ನು ಮೂರು ಸಾವಿರ ಚಿಲ್ಲರೆ ಮನೆಗಳನ್ನು ಫಲಾನುಭವಿಗಳಿಗೆ ಕೊಡುವುದಕ್ಕೆ ಆಗಿಲ್ಲ. ಬೇಗ ಮುಗಿಸಿ ಕೊಡುವಂಥ ಕ್ರಮ ತೆಗೆದುಕೊಳ್ಳುತ್ತೇನೆ.

ಕಾಮರಾಜ ರಸ್ತೆಯಲ್ಲಿ ಕಾಮರಾಜರ ಪ್ರತಿಮೆಯನ್ನು ಸ್ಥಾಪಿಸುವ ಬಗ್ಗೆ

೪೮೨. ಶ್ರೀ ಕೆ. ಜೆ. ಜಾರ್ಜ್(ಭಾರತೀನಗರ).—ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರತರತ್ನ ಶ್ರೀ ಕಾಮರಾಜ್ ನಾಡಾರ್‌ರವರ ಪ್ರತಿಮೆಯನ್ನು ಕಾಮರಾಜ್ ರಸ್ತೆಯಲ್ಲಿ ಇಡಲು ಯೋಜನೆ ಇದೆಯೇ?

ಆ) ಇದರ ಬಗ್ಗೆ ಯಾವುದಾವರೂ ಸಂಸ್ಥೆ ಪತ್ರ ವ್ಯವಹಾರ ಮಾಡಿದೆಯೇ ?

ಇ) ಇದರ ಬಗ್ಗೆ ಒಪ್ಪಿಗೆ ಕೊಡದಿರಲು ಕಾರಣವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಭಾರತರತ್ನ ಶ್ರೀ ಕಾಮರಾಜ್ ಸರ್ವಪಕ್ಷ ಪ್ರತಿಮೆ ಕಮಿಟಿ ನಂ. ೨೦. ವೀಲರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-೫೬೦೦೦೫ ರವರ ಪತ್ರ ವ್ಯವಹಾರ ಮಾಡಿದ್ದಾರೆ

ಇ) ಭಾರತ ರತ್ನ ಶ್ರೀ ಕಾಮರಾಜ್ ಸರ್ವಪಕ್ಷ ಪ್ರತಿಮೆ ಕಮಿಟಿ ರಿಜಿಸ್ಟ್ರಾರ್ ಆಫ್ ಸೊಸೈಟಿಯಿಂದ ನೋಂದಣಿ ಪಡೆದ ಬಗ್ಗೆ ಮಾಹಿತಿ ಒದಗಿಸದೇ ಇದ್ದ ಕಾರಣ ಬೆಂಗಳೂರು ಮಹಾನಗರ ಪಾಲಿಕೆ ಒಪ್ಪಿಗೆ ಕೊಟ್ಟಿರಲಿಲ್ಲ ತದನಂತರ ಈಗ ರಿಜಿಸ್ಟ್ರಾರ್ ಸೊಸೈಟಿಯಿಂದ ನೊಂದಣಿ ಪತ್ರವನ್ನು ಪಡೆದು ಕಳುಹಿಸಿರುತ್ತಾರೆ. ಈಗ ಭಾರತರತ್ನ ಶ್ರೀ ಕಾಮರಾಜ್ ನಾಡಾರ್‌ರವರ ಪ್ರತಿಮೆ ಕಾಮರಾಜ್ ರಸ್ತೆಯಲ್ಲಿ ಇಡಲು ಸರ್ಕಾರಕ್ಕೆ ಕೊಡುವ ವಿಷಯ ಮಹಾನಗರ ಪಾಲಿಕೆಯ ಪರಿಶೀಲನೆಯಲ್ಲಿದೆ.